**ದಿನಾಂಕಃ19.04.2024 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಆರ್.ಬಿ.ಆರ್. ವಕೀಲರಿಂದಃ–**

ನಾನು ವ್ಯವಸಾಯವನ್ನೂ ಸಹ ಮಾಡುತ್ತೇನೆ ಅದಲ್ಲದೆ ನನ್ನದು ಬೀಡಿ ವ್ಯಾಪಾರವೂ ಸಹ ಇರುತ್ತದೆ. ನಾನು 10 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ಆರೋಪಿ ಶಿಕ್ಷಕರಾದ ರಾಮಕೃಷ್ಣಾಚಾರಿ ಅವರ ಮೂಲಕ ಪರಿಚಯ ಆಗಿರುತ್ತಾರೆ. ನನಗೂ ಮತ್ತು ಆರೋಪಿಗೂ ನೇರ ಪರಿಚಯ ಇರುವುದಿಲ್ಲ. ಆರೋಪಿ ಸೆಪ್ಟಂಬರ್ 2019 ರಲ್ಲಿ ಬಂದು ನನಗೆ ಹಣ ಕೇಳಿರುತ್ತಾರೆ. ಈ ವಿಷಯವನ್ನು ಆರೋಪಿಗೆ ನೀಡಿದ ನೋಟೀಸ್‌ನಲ್ಲಿ ಮತ್ತು ದೂರಿನಲ್ಲಿ ಹೇಳಿರುತ್ತೇನೆ.

ಹಣ ಕೇಳುವ ಸಂದರ್ಭದಲ್ಲಿ ಆರೋಪಿಯ ಜೊತೆ ರಾಮಕೃಷ್ಣಾಚಾರಿಯವರೂ ಸಹ ಬಂದಿದ್ದರು. ನನ್ನ ಜೊತೆ ನನ್ನ ಅಣ್ಣ ಅಯೂಬ್ ಖಾನ್ ಮತ್ತು ನನ್ನ ಸ್ನೇಹಿತ ಮೂರ್ತಿ ಹಾಜರಿದ್ದರು. ಆರೋಪಿಗೆ ಹಣವನ್ನು 2020 ಸೆಪ್ಟಂಬರ್ ತಿಂಗಳಲ್ಲಿ ನೀಡಿರುತ್ತೇನೆ, ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಆ ಸಮಯದಲ್ಲಿ ಆರೋಪಿ ಮತ್ತು ರಾಮಕೃಷ್ಣಾಚಾರಿಯವರು ಇದ್ದರು. ನನ್ನ ಜೊತೆ ನನ್ನ ಅಣ್ಣ ಅಯೂಬ್ ಖಾನ್ ಮತ್ತು ನನ್ನ ಸ್ನೇಹಿತ ಮೂರ್ತಿ ಹಾಜರಿದ್ದರು. ಈ ವಿಷಯವನ್ನು ಆರೋಪಿಗೆ ನೀಡಿದ ನೋಟೀಸ್‌ನಲ್ಲಿ ಮತ್ತು ದೂರಿನಲ್ಲಿ ಹೇಳಿರುತ್ತೇನೆ. ಹಣವನ್ನು 6 ತಿಂಗಳ ನಂತರ ಮರಳಿಸುತ್ತೇನೆ ಎಂದು ಹೇಳಿರುತ್ತಾರೆ.

6 ತಿಂಗಳ ಒಳಗೆ 2–3 ಬಾರಿ ಆರೋಪಿಯ ಬಳಿ ನಾನು ಫೋನ್ ಮೂಲಕ ಹಣ ಕೇಳಿರುತ್ತೇನೆ. ಈ ವಿಷಯವನ್ನು ಆರೋಪಿಗೆ ನೀಡಿದ ನೋಟೀಸ್‌ನಲ್ಲಿ ಮತ್ತು ದೂರಿನಲ್ಲಿ ಹೇಳಿರುತ್ತೇನೆ. ಚೆಕ್‌ನ್ನು ಹಣ ಪಡೆದ ದಿನವೇ ನೀಡಿರುತ್ತಾರೆ. ಸದರಿ ಚೆಕ್‌ನ್ನು ಪೂರ್ತಿಯಾಗಿ ಬರೆದು ನೀಡಿರುತ್ತಾರೆ. ನಿಪಿ–1 ಚೆಕ್‌ನಲ್ಲಿ ದಿನಾಂಕ ಮತ್ತು ಹೆಸರು ಬರೆದ ಷಾಯಿಯಲ್ಲಿ ವ್ಯತ್ಯಾಸವಿರುತ್ತದೆ

ಎಂದರೆ ಸರಿಯಲ್ಲ. ನಿಪಿ–1 ರಲ್ಲಿರುವ ಸಹಿಯ ಷಾಯಿ ಬೇರೆ ಪೆನ್ನಿನ ಷಾಯಿಯಾಗಿರುತ್ತದೆ ಎಂದರೆ ಸರಿ.

**ಮುಂದುವರಿದ ಪಾಟೀ–ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.